ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	೩೩೯ (833)
ಸದಸ್ಯರ ಹೆಸರು	:	ಶ್ರೀಮತಿ ಎಸ್. ವೀಣಾ ಅಚ್ಚಯ್ಯ
ಉತ್ತರಿಸುವ ದಿನಾಂಕ	:	10.03.2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿ ಜನಾಂಗದ ಅನೇಕ ಕುಟುಂಬಗಳು ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಹೊಂದದೆ ಇರುವುದರಿಂದ ಸರ್ಕಾರದ ಬಹುತೇಕ ಸವಲತ್ತುಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಸದರಿ ಕುಟುಂಬಗಳಿಗೆ ಈ ಅತ್ಯಾವಶ್ಯ ದಾಖಲೆಗಳನ್ನು ಒದಗಿಸಲು ಸಮಾಜ ಕಲ್ಯಾಣ ಇಲಾಖೆ ಕೈಗೊಂಡಿರುವ ಕ್ರಮಗಳೇನು;	ವಿವಿಧ ಇಲಾಖೆ ಹಾಗೂ ಇಲಾಖೆಯ ನೌಕರರನ್ನು ಬಳಸಿಕೊಂಡು ಹಾಡಿಗಳ ಸರ್ವೆ ಹಾಗೂ ಲೈನ್‌ಮನೆ ಸರ್ವೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಸದರಿ ಸರ್ವೆಗಳಿಂದ ಈ ಕೆಳಕಂಡಂತೆ ದಾಖಲಾತಿಗಳನ್ನು ಹೊಂದಿರದ ಪರಿಶಿಷ್ಟ ಪಂಗಡ ಜನಾಂಗದವರ ಮಾಹಿತಿ ಲಭ್ಯವಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ದಾಖಲಾತಿ ಹೊಂದದೆ ಇರುವವರ ಸಂಖ್ಯೆ			
		ಆಧಾರ್ ಕಾರ್ಡ್	ಮತದಾರರ ಗುರುತಿನ ಚೀಟಿ	ಜಾತಿ/ ಆದಾಯ ದೃಢೀಕರಣ ಪತ್ರ	ಬ್ಯಾಂಕ್ ಖಾತೆ
1	ಮಡಿಕೇರಿ	584	707	1610	150
2	ಸೋಮವಾರಪೇಟೆ	2918	3813	6487	1199
3	ವಿರಾಜಪೇಟೆ	10974	13911	17725	12211
	ಒಟ್ಟು	**14476**	**18431**	**25822**	**13560**

		ಮೇಲ್ಕಂಡಂತೆ ದಾಖಲೆಗಳನ್ನು ಹೊಂದಿಲ್ಲದೆ ಇರುವ ಜನಾಂಗದವರನ್ನು ಭೇಟಿ ಮಾಡಿ ಅವರಲ್ಲಿ ಲಭ್ಯ ಇರುವ ದಾಖಲೆಗಳನ್ನು ಪಡೆದು ದಾಖಲೆಗಳು ಇಲ್ಲದೆ ಇದ್ದರೆ ಸ್ಥಳ ಮಹಜರು ಮಾಡಿ ಸದರಿ ದಾಖಲೆಗಳನ್ನು ಕಂದಾಯ ಇಲಾಖೆಗೆ ನೀಡಿ ದಾಖಲಾತಿಗಳನ್ನು ಮಾಡಲು ಕ್ರಮವಹಿಸಲಾಗುತ್ತಿದೆ. ಸದರಿ ಮಾಹಿತಿಯನ್ನು ಕಂದಾಯ ಇಲಾಖೆಗೆ ನೀಡಿ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಮುಂದುವರೆದು, ಜಿಲ್ಲಾಧಿಕಾರಿಗಳ ಆದೇಶದಂತೆ ಪರಿಶಿಷ್ಟ ಪಂಗಡದವರು ವಾಸಿಸುವ ಪ್ರದೇಶಗಳಿಗೆ ಆಧಾರ್‌ಕಿಟ್‌ಗಳನ್ನು ಕಳುಹಿಸಿ ಆಧಾರ್‌ಕಾರ್ಡ್‌ಗಳನ್ನು ಮಾಡಿಸಲು ಕ್ರಮವಹಿಸಲಾಗುತ್ತಿದೆ.
ಇ)	ಹಲವಾರು ಆದಿವಾಸಿ ಜನಾಂಗದ ಕುಟುಂಬಗಳಿಗೆ ಈ ದಾಖಲೆಗಳ ಮಹತ್ವ ತಿಳಿಯದಿರುವುದುರಿಂದ ಹಾಗೂ ಪಡೆಯುವ ವಿಧಾನ ಗೊತ್ತಿಲ್ಲದಿರುವುದರಿಂದ ಅವರಿಗೆ ಸಹಾಯ ಮಾಡಲು ಇಲಾಖೆ ಯಾವ ಕ್ರಮ ವಹಿಸಲಿದೆ?	ಈಗಾಗಲೇ ಇಲಾಖಾ ಸಿಬ್ಬಂದಿಗಳನ್ನು ಪ್ರತಿ ಹಾಡಿ/ಗ್ರಾಮಕ್ಕೆ ಒಬ್ಬರಂತೆ ನಿಯೋಜಿಸಿ ಪ್ರತಿ ಆದಿವಾಸಿ ಕುಟುಂಬಗಳಿಗೆ ಆಧಾರ್‌ಕಾರ್ಡ್, ಪಡಿತರ ಚೀಟಿ, ಜಾತಿ/ಆದಾಯ ದೃಢೀಕರಣ ಪತ್ರ, ಮತದಾರರ ಗುರುತಿನ ಚೀಟಿ ಮಾಡಿಸಲು ಕ್ರಮವಹಿಸಲಾಗಿರುತ್ತದೆ.

ಸಕಇ 89 ಎಸ್‌ಟಿಪಿ 2021

(ಬಿ ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು